
ನಡೆದುಹೋಯಿತು. ಗುಂಪಿನ ನಡುವೆ ಓಡಾಡುತ್ತಿದ್ದ ಗೋಪಾಲನ್ ಅವರ ಭಾಷೆಯ 'ಪುಡಿ-ದೆಯ್ಯ'ವೊಂದು ಹಠಾತ್ತಾಗಿ ಬಂದು ನನ್ನೆದುರು ನಿಂತುಬಿಟ್ಟಿತು. ಒಂದು ಕ್ಷಣ ಏನು ಮಾಡಬೇಕೆಂದು ತಿಳಿಯದೆ ನಾನು ಅಪ್ರತಿಭನಾದೆ.'

'...ಆವಾಹಿತ ವ್ಯಕ್ತಿಯೊಂದು ಅಷ್ಟು ಸನಿಹಕ್ಕೆ ಬಂದು ನನ್ನನ್ನೇ ದಿಟ್ಟಿಸುತ್ತಿರುವುದು ನನಗೆ ಮೊದಲ ಬಾರಿಯ ಅನುಭವ. ಆ ಕ್ಷಣ ಮೈ ಕಂಪಿಸಿತು.'

'...ಅವನ ಚಲನೆಯಲ್ಲಿ ವಿಶೇಷ ಹೆಚ್ಚುಗಾರಿಕೆಯಿರಲಿಲ್ಲ; ಆದರೆ, ಒಂದು ಭಂಗಿಯಿಂದ ಇನ್ನೊಂದು ಭಂಗಿಗೆ ಆತ ಕ್ಷಿಪ್ರವಾಗಿ ಲಂಘಿಸುತ್ತಿದ್ದ. ಅಂಥ ಆಕ್ರಮಣಕಾರಿ ಚಲನೆಗಳ ಮೂಲಕ ಆ ದೆಯ್ಯ ಒಮ್ಮೊಮ್ಮೆ ನನ್ನ ದಿಕ್ಕಿಗೆ ಬರುತ್ತಿತ್ತು; ಮತ್ತೆ ಹಿಂದೆ ಸರಿಯುತ್ತಿತ್ತು. ನಾನು ಹಿಂದೆ ಹಿಂದೆ ಸರಿದರೆ, ಆ ದೆಯ್ಯವೂ ಮುಂದೆ ಮುಂದೆ ಬರುತ್ತಿತ್ತು. ಅದು ಅತ್ತಿತ್ತ ಜರುಗುತ್ತಿದ್ದಂತೆ ಸುತ್ತಲಿದ್ದ ಗುಂಪೂ ಅದಕ್ಕೆ ಬೇಕಾಗುವಷ್ಟು ಜಾಗ ಖಾಲಿ ಮಾಡಿಕೊಡುತ್ತಿತ್ತು. ಏನು ನಡೆಯುತ್ತಿದೆ ಎಂದು ಗೊತ್ತಾಗುವ ಮೊದಲೇ ನಾನೂ ತೆಯ್ಯಮ್ ಆಟದೊಳಗೆ ಸೇರಿಹೋಗಿದ್ದೆ. ಸುತ್ತ ಸೇರಿದ್ದ ಜನರೆಲ್ಲ ಅದನ್ನು ನೋಡುವಷ್ಟೇ ನನ್ನನ್ನೂ ನೋಡುತ್ತಿದ್ದುದರಿಂದ ನನ್ನೊಳಗೆ ವಿಚಿತ್ರ ಭಯವೂ ಸಂಭ್ರಮವೂ ಒಟ್ಟೊಟ್ಟಿಗೇ ಆಗುತ್ತಿತ್ತು.''

ವೀಕ್ಷಕನಾಗಲು ಹೋದವನೊಬ್ಬ ತಾನೇ ಆಟದ ಭಾಗವಾಗಿಬಿಡುವ – ತಾನು, ತನ್ನಂಥ ಅಸಂಖ್ಯಾತ ಜನರನ್ನು ಭಾಗಿಯಾಗಿಸಿಕೊಂಡೇ ಆ 'ಆಟ' ನಡೆಯುತ್ತಿರುವುದು ಎಂಬುದು ಅರಿವಾಗುವ ಗಳಿಗೆಯ ಮನಸ್ಥಿತಿಯೇ ಈ ಎಲ್ಲ ಬರಹಗಳ ಹಿಂದಿರುವ ತಂತು. ಹಾಗೆಂದು ಇದೇನೂ ಜ್ಞಾನೋದಯದ ರೀತಿ ಒಮ್ಮಿಂದೊಮ್ಮೆಲೇ ಬೋಧೆಯಾಗಿದ್ದಲ್ಲ. ತನಗಾದ ಅನುಭವಕ್ಕೆ ಬುದ್ಧಿ-ಭಾವಗಳನ್ನು ಅಡವಿಟ್ಟು ಶರಣಾಗುವುದೂ ಅಲ್ಲ. ಹಾಗಾಗಿದ್ದರೆ ಲೇಖಕರು ಆ ಅನುಭವವನ್ನು ಹಂಚಿಕೊಳ್ಳಲು ಮೂವತ್ತು ವರ್ಷ ಕಾಯಬೇಕಾಗಿಯೂ ಇರಲಿಲ್ಲ. ಒಂದು ಮಾಯದ ಗಳಿಗೆಯಂಥ ಆ ಅನುಭವವು ಇಷ್ಟು ವರ್ಷದುದ್ದಕ್ಕೂ ಬೇರೆ ಬೇರೆ ರೀತಿಗಳಲ್ಲಿ ಅವರ ಮನಸಲ್ಲಿ ಬೆಳೆಯುತ್ತಲೇ ಬಂದಿರುವುದನ್ನು ಅವರೇ ಹೇಳಿಕೊಂಡಿದ್ದಾರೆ.

ಮೇಲಿನ ಘಟನೆಯಷ್ಟನ್ನೇ ಕಲ್ಪಿಸಿಕೊಂಡರೆ ದೆಯ್ಯದ ಪಾತ್ರಿಯ ಎದುರಲ್ಲಿ ಕಳೆದುಹೋಗಿ ಭಕ್ತಪರವಶನಾದ ವ್ಯಕ್ತಿಯೊಬ್ಬನ ಚಿತ್ರವೊಂದು ಮನಸಲ್ಲಿ ಮೂಡುತ್ತದೆ. ಆದರೆ ಲೇಖಕರು ಇಲ್ಲಿ ಭಕ್ತಿಪರವಶರಾಗಿ ಕಳೆದುಹೋಗಿಲ್ಲ. ಬದಲಿಗೆ




**ಕೃತಿ: ಮಾಯದ ಕನ್ನಡಿ**
ಲೇಖಕ: ಅಕ್ಷರ ಕೆ.ವಿ.
ಪು: 224 ಬೆಲೆ: ₹ 250
ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು.
ಸಂಪರ್ಕ: aksharaprakashana.com